ವಾರದ ಪತ್ರ

## ಕ್ರೀಡಾಪಟುಗಳ ಸಾಧನೆ ಸುದ್ದಿಯಲ್ಲವೇ?

19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಕ್ರೀಡಾಪಟುಗಳು ಶ್ರೇಷ್ಠ ಸಾಧನೆಯನ್ನು ಮಾಡಿದ್ದಾರೆ. ಭಾರತ ಹಿಂದೆಂದೂ ಇಷ್ಟು ಚಿನ್ನದ ಪದಕಗಳನ್ನು ಗೆದ್ದಿರಲಿಲ್ಲ. ನಮ್ಮ ಕ್ರೀಡಾಪಟುಗಳ ಈ ಸಾಧನೆಯನ್ನು ದೂರದರ್ಶನದ ಚಂದನ ಹೊರತುಪಡಿಸಿ ಬೇರೆ ಸುದ್ದಿ ವಾಹಿನಿಗಳಲ್ಲಿ ಪ್ರಸಾರ ಮಾಡುವುದೇ ಇಲ್ಲ. ದಯವಿಟ್ಟು ಈ ಕ್ರೀಡಾಪಟುಗಳು ಗೆದ್ದ ಪದಕಗಳ ವಿವರ, ಅವರ ವೈಯಕ್ತಿಕ ವಿವರ ಮತ್ತು ಕೋಚ್‌ಗಳ ಬಗ್ಗೆ ಪ್ರಸಾರ ಮಾಡಿದರೆ ಕನಸು ಕಣ್ಣಿನಲ್ಲಿ ಕಾಯುವ ಹೊಸ ತಲೆಮಾರಿನ ಆಟಗಾರರಿಗೆ ಮಾದರಿಯಾದೀತು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ



## ಆಧುನಿಕ ಕಾಲದಿಂದ ಏಕೀ 'ಅಂತರ?'

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದ ನಾಯಕ ಎ.ಜೆ.ಯ ಹೆಂಡತಿ ಅಂತರಾ ಸಾವಿಗೀಡಾಗಿ, ಲೀಲಾ ಎರಡನೇ ಹೆಂಡತಿಯಾಗಿ ಬರುತ್ತಾಳೆ. ಅಷ್ಟರಲ್ಲೇ ಅಂತರಾಳಾ ಪ್ರತಿರೂಪವಾಗಿ ಪ್ರಾರ್ಥನಾ ಬರುತ್ತಾಳೆ. ಬಂದವಳು 'ತಾನು ಸತ್ತಿಲ್ಲ' ಎಂದು ಸಮರ್ಥಿಸುತ್ತಾಳೆ. ಆಸ್ತಿಯನ್ನು ಹೊಡೆದುಕೊಳ್ಳಲು ಎಲ್ಲ ಪ್ರಯತ್ನವನ್ನೂ ಮಾಡುತ್ತಾಳೆ. ಅವಳನ್ನು ಎದುರಿಸಲು ಲೀಲಾ ಸೂಕ್ತ ದಾಖಲೆಯನ್ನು ಸಂಗ್ರಹಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳುವುದಿಲ್ಲ. ಕೈಯಲ್ಲಿ ಮೊಬೈಲ್ ಇದ್ದರೂ ಅದರಲ್ಲಿ ಫೋಟೊ ಮತ್ತು ರೆಕಾರ್ಡ್ ಕೂಡ ಮಾಡುವುದಿಲ್ಲ. ಆಧುನಿಕ ಬದುಕಿನ ಇವತ್ತಿನ ಸಂದರ್ಭದ ಸಾಧ್ಯತೆಯನ್ನು ತೋರಿಸದೇ ಇರುವುದು ಕಥೆಯ ಮಿತಿ.

—ಎಸ್. ವೇದಗರ್ಭ, ಬೆಂಗಳೂರು

## ಗಮನಾರ್ಹ ಆರಾಧನಾ ಮತ್ತು ಚಾರುಲತಾ

ಕಲರ್ಸ್ ಕನ್ನಡದ 'ಅಂತರಪಟ' ಮತ್ತು 'ರಾಮಾಚಾರಿ' ಧಾರಾವಾಹಿಗಳು ದಿನಕಳೆದಂತೆ ಆಸಕ್ತಿಯನ್ನು ಹುಟ್ಟಿಸುತ್ತಿವೆ. 'ಅಂತರಪಟ'ದಲ್ಲಿ ಆರಾಧನಾ ಪಡುತ್ತಿರುವ ಕಷ್ಟಗಳು ಹಾಗೂ ಅವುಗಳನ್ನು ಎದುರಿಸಲು ಅವಳು ತೋರುತ್ತಿರುವ ಧೈರ್ಯ ಮೆಚ್ಚುಗೆ ಆಗುತ್ತದೆ. 'ರಾಮಾಚಾರಿ'ಯಲ್ಲಿ ಚಾರುಲತಾಳ ಪಾತ್ರ ವೈವಿಧ್ಯದ್ದು ಅನಿಸುತ್ತದೆ. ಆಕೆ ಕುಟುಂಬದ ಎಲ್ಲ ಸದಸ್ಯರ ಪ್ರೀತಿ ಗಳಿಸಲು ಪಡುವ ಕಷ್ಟ, ಹಾಸ್ಯ ಪ್ರಸಂಗಗಳು ಚೆನ್ನಾಗಿವೆ.

—ವಾಸುದೇವ, ಹಾಸನ

## ಮನ ಗೆದ್ದ 'ಶ್ರಾವಣಿ'ಯೂ ಚೀಕೂ ನಾಯಿಯೂ...

ಸ್ಟಾರ್ ಸುವರ್ಣದಲ್ಲಿ 'ಸೀತೆಯ ರಾಮ', 'ಮಹಾಭಾರತ', 'ರಾಧಾಕೃಷ್ಣ' ಧಾರಾವಾಹಿಗಳ ನಂತರ ಪ್ರೇಮಕಥಾ ಹಂದರದಲ್ಲಿ 'ಅವನು ಮತ್ತು ಶ್ರಾವಣಿ' ಎನ್ನುವ ಉತ್ತಮ ಧಾರಾವಾಹಿ ಮೂಡಿ ಬರುತ್ತಿದೆ. ಇದರ ನಡುವೆ ಅನೇಕ ಧಾರಾವಾಹಿಗಳು ಸಪ್ಪೆ ಎನಿಸಿದ್ದವು. ಇತ್ತೀಚೆಗೆ ಪ್ರಾರಂಭವಾಗಿರುವ ಶ್ರಾವಣಿಯ ಕಥೆ ನಮ್ಮ ಮನಸ್ಸನ್ನು ಗೆಲ್ಲುವಲ್ಲಿ ಸಫಲವಾಗಿದೆ. ಇದರಲ್ಲಿ ನನಗೆ ತುಂಬಾ ಇಷ್ಟವಾಗಿದ್ದು ಚೀಕೂ ನಾಯಿ.

—ಪ್ರವೀಣ ಮಾಯರ್, ತೀರ್ಥಹಳ್ಳಿ

## ಕನ್ನಡದ ಕಂಪು ಕೆಡದಿರಲಿ

ಸ್ಟಾರ್ ಸ್ಪೋರ್ಟ್ಸ್ ಕನ್ನಡದಲ್ಲಿ ಹಲವಾರು ಕ್ರಿಕೆಟ್ ಪಂದ್ಯಗಳನ್ನು ನೇರ ಪ್ರಸಾರ ಮಾಡುತ್ತಾರೆ. ಅದರಲ್ಲಿ ಕರ್ನಾಟಕದ ಮಾಜಿ ಕ್ರಿಕೆಟಿಗರು ವೀಕ್ಷಕ ವಿವರಣೆ ನೀಡುತ್ತಾರೆ. ವರ್ಷಗಳ ನಂತರ ದೂರದರ್ಶನದ ಮುಖೇನ ಗುಂಡಪ್ಪ ವಿಶ್ವನಾಥ್, ಅನಿಲ್ ಕುಂಬ್ಳೆ, ವಿನಯ್ ಕುಮಾರ್, ವೆಂಕಟೇಶ್ ಪ್ರಸಾದ್, ವಿಜಯ್ ಭಾರದ್ವಾಜ್ ಮುಂತಾದವರು ತಮ್ಮ ಸ್ವಚ್ಛ ಕನ್ನಡದ ಮೂಲಕ ಕಾರ್ಯಕ್ರಮಕ್ಕೆ ಮೆರುಗು ತರುತ್ತಿದ್ದಾರೆ. ಆದರೆ, ಪರದೆಯ ಮೇಲೆ ಮೂಡಿ ಬರುವ ಕೆಲವು ಮಾಹಿತಿಗಳು ದೋಷಯುಕ್ತವಾಗಿರುತ್ತವೆ. '31 ರನ್ಸ್ ಬೇಕಾಗಿರುವ, 69 ಬಾಲ್ಸ್ ಉಳಿದಿರುವ' ಎಂಬ ಅಪೂರ್ಣ ವಾಕ್ಯಗಳು ಗೊಂದಲ ಹುಟ್ಟಿಸುತ್ತವೆ. ಇದರಲ್ಲಿ ಭಾಷೆಯ ಸೊಗಡಿನ ಜೊತೆ ವ್ಯಾಕರಣ ದೋಷ ಇರುವುದು ಎದ್ದು ಕಾಣಿಸುತ್ತದೆ. ಅಷ್ಟೇ ಅಲ್ಲದೆ, ಹಲವು ವೀಕ್ಷಕರು ಆಟದ ಬಗ್ಗೆ ಕೇಳುವ ಪ್ರಶ್ನೆಗಳು ನೇರ ಪ್ರಸಾರದಲ್ಲಿ ಕನ್ನಡ ಭಾಷೆ ಇಂಗ್ಲಿಷ್ ಲಿಪಿ ಆಗುತ್ತದೆ. ಅದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ಪಾಪ, 'ಬಿಗ್ ಬಾಸ್'ಗೆ 'ಲಕ್ಷಣ' ಬಲಿ!

ಕಲರ್ಸ್ ಕನ್ನಡದ 'ಲಕ್ಷಣ' ಧಾರಾವಾಹಿಯನ್ನು ಬೇರೆ ಕಥೆಗಳಂತೆ ಎಳೆಯುತ್ತಲೇ ಬಂದಿದ್ದರು. ಆದರೂ ಅದು ಕುತೂಹಲವನ್ನು ಉಳಿಸಿಕೊಂಡೇ ಸಾಗುತ್ತಿತ್ತು. ಕೊಂಚ ಲವಲವಿಕೆಯನ್ನು ನಿರೀಕ್ಷಿಸುವಂತೆ ಇತ್ತು. ಇದರಲ್ಲಿ ಶಕುಂತಲಾದೇವಿ ಅವರ ಕುಟುಂಬ ಸರ್ವಸ್ವವನ್ನೂ ಕಳೆದುಕೊಂಡು ಬೀದಿಗೆ ಬಿದ್ದಿತ್ತು. ಅದನ್ನೇ ಒಂದು ಛಲವನ್ನಾಗಿ ಸ್ವೀಕರಿಸಿ ಮತ್ತೆ ಮೇಲೇಳುವ ಸಾಧನೆ ತೋರುವಂತಹ ಕಥೆ ಅದಾಗುತ್ತದೆ ಎಂದು ಭಾವಿಸಿದ್ದೆವು. ಆದರೆ 'ಬಿಗ್ ಬಾಸ್'ಗೆ ಲಕ್ಷಣ ಬಲಿಯಾದಳು ಎಂದೆನಿಸುತ್ತದೆ. ಕೊನೆಯ ಕೆಲವು ಸಂಚಿಕೆಗಳು ವಂದೇಭಾರತ್ ರೈಲಿಗಿಂತ ವೇಗವಾಗಿಯೇ ಓಡಿದವು. ಪ್ರಸಾರದ ಸಮಯ ಬದಲಿಸಿ ನಿಧಾನವಾಗಿ ಕೊನೆಗಾಣಿಸಬಹುದಿತ್ತು.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಜಲಪ್ರಳಯಕ್ಕೆ ಭೂಕಂಪ ಕಾರಣ

ಸುದ್ದಿ ವಾಹಿನಿಗಳಲ್ಲಿ ಸುದ್ದಿ ಬಿತ್ತರಿಸುವುದೇ ಪ್ರಳಯ ಭಯಂಕರವಾಗಿದೆ. ಇತ್ತೀಚೆಗೆ ಸಿಕ್ಕಿಂ ಪ್ರವಾಹದ ಬಗ್ಗೆ ಹೇಳುತ್ತ, ಅದಕ್ಕೆ ನೇಪಾಳದಲ್ಲಿ ಆದ ಭೂಕಂಪವನ್ನೇ ಅಪರಾಧಿ ಎನ್ನುವಂತೆ ಹೇಳಿದರು. ಸಿಕ್ಕಿಂನ ಜಲಪ್ರಳಯಕ್ಕೆ ಆ ಭೂಕಂಪ ಹೇಗೆ ಕಾರಣ ಆದೀತು? ಎರಡೂ ನೈಸರ್ಗಿಕ ವಿಕೋಪಗಳೇ. ಯಾವುದನ್ನೂ ಯಾರೋ ಹೇಳಿ ಮಾಡಿಸಿದ್ದಾರೆ ಎನ್ನುವಂತೆ ಹೇಳುವುದು ಸರಿ ಅಲ್ಲ. ಇಂತಹ ಸುದ್ದಿಗಳನ್ನು ಬಿತ್ತರಿಸುವಾಗ ಬೇಕಾದ ಸಂಯಮವನ್ನು ತೋರಿಸುತ್ತಿಲ್ಲ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮರೆಯಾದ 'ಮಾಯಾಮೃಗ'

ಒಮ್ಮೆ ಆಕಸ್ಮಿಕವಾಗಿ 'ಮತ್ತೆ ಮಾಯಾಮೃಗ'ವನ್ನು ಸಿರಿ ಕನ್ನಡದಲ್ಲಿ ನೋಡಿದೆ. ಅವತ್ತಿನಿಂದ ನಿತ್ಯವೂ ಮನೆಯವರೆಲ್ಲ ಅದನ್ನು ನೋಡಲು ಟೀವಿ ಮುಂದೆ ಕುಳಿತುಕೊಳ್ಳುತ್ತಿದ್ದೆವು. ಮೊನ್ನೆ ಮೊನ್ನೆ ಇದ್ದಕ್ಕಿದ್ದಂತೆ ಅದು ಮಾಯವಾಗಿರುವುದು ಕಂಡು ಬೇಸರವಾಯಿತು. ಇದ್ದಿದ್ದರಲ್ಲಿ ಉತ್ತಮ ಧಾರಾವಾಹಿ ಎಂದು ಅನಿಸಿತ್ತು. ಒಟ್ಟಾರೆ, ನಟನೆ, ಸಂಭಾಷಣೆ, ಹೊಸ ಕಥೆಗಳಿಂದ ವೀಕ್ಷಕರನ್ನು ಸೆಳೆದಿಡುವಂತಹ ಧಾರಾವಾಹಿಗಳ ಅವಶ್ಯಕತೆ ಇದೆ ಎಂದು ನನ್ನ ಅಭಿಪ್ರಾಯ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

